(ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎನ್.ಜಿ. ಹಾಲಪ್ಪ(ಪರಿಸರ, ವಿಜ್ಞಾನ, ತಂತ್ರಜ್ಞಾನ ಮತ್ತು ಮಲೆನಾಡು ಅಭಿವೃದ್ಧಿ ರಾಜ್ಯ ಸಚಿವರು):- ಮಾನ್ಯ ಉಪಾಧ್ಯಕ್ಷರೇ, 1993ರ ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು:- ಪ್ರಸ್ತಾವ ಏನೆಂದರೆ ''1993ರ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಅಧ್ಯಕ್ಷರ ಅನುಮತಿ ಮೇರೆಗೆ ಪ್ರಸ್ತಾಪಿಸಲಾದ ವಿಷಯ.

ವಿಷಯ:- ಮೈಸೂರು ನಗರದ ಮಂಡಿ ಮೊಹಲ್ಲದಲ್ಲಿ ಬಾಂಬ್ ಸಿಡಿತ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಮೈಸೂರು ನಗರದ ಮಂಡಿ ಮೊಹಲ್ಲದಲ್ಲಿ ಇವತ್ತು ಬಾಂಬ್ ಸಿಡಿದಿದೆ. ಇವತ್ತು ಇದರ ಬಗ್ಗೆ ಸರ್ಕಾರದ ಹೇಳಿಕೆ ಏನಿದೆ ಎಂಬುದನ್ನು ತಿಳಿಸಬೇಕು. ಅಧ್ಯಕ್ಷರೇ ಈ ಬಗ್ಗೆ ಒಂದು ಹೇಳಿಕೆಯನ್ನು ಸರ್ಕಾರದಿಂದ ಕೊಡಿಸಬೇಕು. ಜನರು ಭಯ, ಭೀತಿಯಿಂದ ಇದ್ದಾರೆ. ಅವರಿಗೆ ರಕ್ಷಣೆ ಕೊಡಬೇಕಾಗಿದೆ. ನಿನ್ನೆ, ಇವತ್ತು ಏನು ನಡೆದಿದೆ ಅದಕ್ಕೆ ಕಾರಣವೇನು, ಯಾರು ಯಾರು ಸಂಬಂಧಪಟ್ಟವರು, ಏನು ಪರಿಸ್ಥಿತಿ ಎಂಬುದು ಸರ್ಕಾರ ಹೇಳಬೇಕು. ಇದು ಪ್ರಮುಖವಾದಂತಹ ಪ್ರಶ್ನೆಯಾಗಿದೆ. ರಾಜ್ಯದ ಎಲ್ಲಾ ಕಡೆಗಳಲ್ಲಿ ಬಂದೋಬಸ್ತು ಮಾಡಿದ್ದೇವೆ, ಬಾಂಬ್ ಹೊರಗಡೆಯಿಂದ ಬರದಂತೆ ತಡೆಯುತ್ತಿದ್ದೇವೆ; ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಇದರ ಬಗ್ಗೆ ತೀವ್ರವಾದಂತಹ ಎಚ್ಚರ ವಹಿಸಬೇಕು, ಇದು ಅತ್ಯಂತ ಗಂಭೀರವಾದಂತಹ ಪರಿಸ್ಥಿತಿ ಎನ್ನತಕ್ಕಂಥ ಮಾತನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ.

ಆರ್.ವಿ. ದೇಶಪಾಂಡೆ:- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಅಫ್ಜಲ್‌ಪುರದ ವಿಚಾರದಲ್ಲಿ ಒಂದು ಸ್ಟೇಟ್‌ಮೆಂಟ್‌ನ್ನು ಮಾಡುತ್ತಿದ್ದೀರಿ. ನಾನು ಅದರ ಬಗ್ಗೆ ಮುಂಚಾನೆ ಹೇಳಿದ್ದೇನೆ. ಈ ಬಾಂಬ್ ಬ್ಲಾಸ್ಟ್ ಮೈಸೂರಿನಲ್ಲಿ ನಡೆದಿರುವುದನ್ನು ತಮ್ಮ ಪೋಲೀಸ್ ಅಧಿಕಾರಿಗಳು ಒಪ್ಪಿಕೊಳ್ಳುತ್ತಾರೆ. ಅದು ಕಂಟ್ರಿ ಮೇಡ್ ಬಾಂಬ್ ಬ್ಲಾಸ್ಟ್ ಎಕ್ಸ್‌ಪ್ಲೋಡೆಡ್ ಎಂದು ತಮ್ಮ ಪೋಲೀಸ್ ಆಫೀಸರ್ಸ್ ಒಪ್ಪಿಕೊಳ್ಳುತ್ತಾರೆ. ಇದು ಇವತ್ತಿನ ದಿವಸ ಪೇಪರ್‌ನಲ್ಲಿ ಬಂದಿದೆ. ನನಗೆ ನಿಜವಾಗಿ ಆಶ್ಚರ್ಯವಾಗುತ್ತಿದೆ, ಇದೆಲ್ಲಾ ಬಹಳ ಸೆನ್ಸಿಟಿವ್ ಏರಿಯಾ. ಆ ಏರಿಯಾದಲ್ಲಿ ಏಕೆ ಕ್ರಮ ಆಗುತ್ತಿಲ್ಲ. ಏಕೆ ಅಲ್ಲಿ ಸಂರಕ್ಷಣೆ ಆಗುತ್ತಿಲ್ಲ. ಏಕೆ ಈ ರೀತಿ ಬಾಂಬ್ ಬ್ಲಾಸ್ಟ್ ಆಗುತ್ತಿದೆ? ಇನ್ನು ನಿಮಗೆ ಯಾರನ್ನೂ ಹಿಡಿಯುವುದಕ್ಕೆ ಆಗುತ್ತಿಲ್ಲ. ಇದಕ್ಕೆ ಸಂಬಂಧಪಟ್ಟವರನ್ನು ಅರೆಸ್ಟ್ ಏಕೆ ಮಾಡಿಲ್ಲ? ಇದು ಮೈಸೂರಿನಲ್ಲಿ 3ನೇ ಬಾರಿ ಆಗುತ್ತಿದೆ. ಕೆಲವು ಸಾರಿ ಇದು ಭೂಕಂಪ ಎಂದು ಹೇಳುತ್ತಾರೆ, ಕೆಲವು ಸಲ ಮತ್ತೊಂದು ಹೇಳುತ್ತಾರೆ. ಹಾಗಾಗಿ ಇವತ್ತು ಜನರಲ್ಲಿ ಒಂದು ಭಯದ ವಾತಾವರಣ ಸಾಕಷ್ಟು ನಿರ್ಮಾಣವಾಗಿದೆ. ಇವತ್ತು ನನಗೆ ಮೈಸೂರಿನಿಂದ ಬೆಳಗಿನ ಜಾವ ಫೋನ್ ಬಂತು. ಮತ್ತೆ ಈ ರೀತಿಯಾಗಿದೆ ಎಂದು ತಿಳಿಸಿದರು. ಆದುದರಿಂದ ಪೋಲೀಸ್ ಆಫೀಸರ್ಸ್ ಇದನ್ನು ಒಪ್ಪಿಕೊಳ್ಳುತ್ತಿದ್ದಾರೆ. ನೀವು ಎಷ್ಟು ಜನರನ್ನು ಅರೆಸ್ಟ್ ಮಾಡಿದ್ದೀರಿ. ಅದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಇದು ಕಮ್ಯೂನಲ್ ಗಲಾಟೆ ಆಗಿತ್ತಲ್ಲ ಅಲ್ಲಿಯೇ ಆಗಿದೆ. ಆ ಗಲಾಟೆ ಅಂದು ಮೈಸೂರಿನ ಆ ಭಾಗದಲ್ಲಿ ಹೆಚ್ಚು ಆಗಿತ್ತು.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಉಪಾಧ್ಯಕ್ಷರೇ, ಮೈಸೂರಿನ ಸುತ್ತಮುತ್ತ ಜಲಾಶಯಗಳು ಇವೆ. ಒಳ್ಳೆಯ ಬಿಲ್ಡಿಂಗ್‌ಗಳು ಇದೆ. ನೀವು ಇದನ್ನು ಬಹಳ ಜವಾಬ್ದಾರಿಯಿಂದ ಎದುರಿಸಬೇಕಾಗಿದೆ.

ಶ್ರೀ ಆರ್.ವಿ. ದೇಶಪಾಂಡೆ:- ಇದು ಒಂದು ಕಡೆ ಇದ್ದರೆ, ಮತ್ತೊಂದು ಕಡೆ ತಾವು ಒಂದು ಮಾತು ಹೇಳಿದ್ದೀರಿ, ವೀರಪ್ಪನ್ ವಿಚಾರದಲ್ಲಿ ನನಗೆ 20 ದಿನ ಡೆಡ್‌ಲೈನ್ ನೀವು ಕೊಟ್ಟರೆ ನಾನು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದೀರಿ. ಆದರೆ ಇವತ್ತು ಒಂದು ನ್ಯೂಸ್ ಬಂದಿದೆ, ನೀವು ಅಲ್ಲಿ ವೀರಪ್ಪನ್ ಹಿಡಿಯುವುದಕ್ಕೆ ಡಿಐಜಿ ಬಿದರಿಯವರಿಗೆ ಚಾರ್ಜ್ ಕೊಟ್ಟಿದ್ದೀರಿ. ಅವರು 60 ದಿನ ರಜಾ ತೆಗೆದುಕೊಂಡು ನಿಮ್ಮ ಕಾಟ ಸಾಕು ನಮಗೆ ವೀರಪ್ಪನ್ ಹಿಡಿಯುವುದಕ್ಕೆ ಆಗುವುದಿಲ್ಲ ಎಂದು ಬಂದಿದ್ದಾರೆ.. ಏಕೆಂದರೆ In today's news it is said. Bidari, DIG seeks 16 days leave. You have said 20 days deadline, DIG seeks 16 days leave. I think he has been demoralised. He is going on 16 days leave. It is a news. I do not know. You are the Home Minister. You are the best judge in this situation. ತಾವು ಏನು ಹೇಳುತ್ತಿದ್ದೀರಿ, ಆದರೆ ಏನಾಗುತ್ತಾ ಇದೆ ಎಂದು ನಮಗೆ ಗೊತ್ತಾಗುತ್ತಾ ಇಲ್ಲ ಪೋಲೀಸ್ ಇಲಾಖೆಯಲ್ಲಿ ನಿಮ್ಮ ಹಿಡಿತ ಹೋಗುತ್ತಿದೆ ಎಂದು ನನ್ನ ಅನಿಸಿಕೆ. ಆದ್ದರಿಂದ ಅದರ ಬಗ್ಗೆ ತಾವು ಸ್ಪಷ್ಟೀಕರಣ ನೀಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ವೀರಪ್ಪಮೊಯಿಲಿ:- ಸನ್ಮಾನ್ಯ ಉಪಾಧ್ಯಕ್ಷರೇ, ಕೊನೆಯಲ್ಲಿ ನೀವು ಏನು ಹೇಳಿದ್ದೀರಿ, He has been posted as a DIG, Special Task Force. ಅಲ್ಲಿ ಒಂದು ವರ್ಷ ಹಿಂದೆ ಅಜಯ್ ಕುಮಾರ್‌ನನ್ನು ಡಿಐಜಿಯಾಗಿ ಪೋಸ್ಟ್ ಮಾಡಿದ್ದೇವೆ. There are no reasons to change Ajay Kumar Singh just because Bidari has gone to Special Task Force. There is no question of demoralisation. He was incharge. Ajay Kumar singh has undegone an operation in Bangalore. ಅವನು ಬೆಂಗಳೂರಿಗೆ ಬಂದಿದ್ದಕ್ಕೆ temporarily ಬಿದರಿಯವರು ಚಾರ್ಜ್‌ನಲ್ಲಿ ಇದ್ದರು. There is no question, of such things he has applied for leave. Any Officers they are bound to discharge their duties. They are in Police Department. There is a discipline in Police. Wherever they are posted, they must go and work. On this reason, if he has applied for leave, he has no business to apply for leave. We are not going to tolerate it. I do not think that. He is a good officer. He cannot be a good Officer if he has applied leave on this reason, which we are not going to tolerate. I think that is not the reason. He is a very fine Officer. He is a very disciplined Officer. I think he has not applied leave on that ground. Let us not read like that, because, it may reflect on him.

SRI R.V.DESHPANDE:- You have take n a challenge that you have posted avery competent Officer.

ಶ್ರೀ ವಾಟಾಳ್ ನಾಗರಾಜ್:- ಇಂಥ ಒಂದು ಪರಿಸ್ಥಿತಿ ಏನು ಇದೆ ಅದರ ಬಗ್ಗೆ ತಾವು ಚಿಂತನೆ ಮಾಡಬೇಕು ಅಷ್ಟೇ ಹೊರತು, ...

You said , he is a competent Officer. Now we are worried.

ಶ್ರೀ ಆರ್.ವಿ. ದೇಶಪಾಂಡೆ:- ಒಂದು ಕಡೆ ನೀವು 20 ದಿವಸದಲ್ಲಿ ಮಾಡುತ್ತೇವೆ ಎಂದು ಹೇಳಿದ್ದೀರಿ, ಆದರೆ ಮತ್ತೊಂದು ಕಡೆ ಈ ರೀತಿ ಆಗುತ್ತಿದೆ. ಆದುದರಿಂದ caution ಮಾಡುತ್ತಿದ್ದೇನೆ.

Sri. M. Veerappa Moily :- Our strategy will not depend on one or two Officers. It is a Government's will power to catch these people. There is no question about it. Therefore, we are not bothered.

ಶ್ರೀ ವಾಟಾಳ್ ನಾಗರಾಜ್:- ತಾವು ಅವನನ್ನು 20 ದಿವಸದಲ್ಲಿ ಹಿಡಿಯುತ್ತೇವೆ ಎಂದು ಹೇಳಿದ್ದೀರಿ. ನಮಗೆ ಸಂಶಯವಾಗುತ್ತಿದೆ, ನೀವು ಎಲ್ಲಾದರೂ ಅವನನ್ನು ಹಿಡಿದು ಇಟ್ಟಿದ್ದೀರೋ ಏನೋ ಎಂದು. ನೀವು ಎಲ್ಲದರೂ ಇಟ್ಟಿದ್ದರೆ 20ನೇ ತಾರೀಖು ಅದನ್ನು ಹೊರಗಡೆ ಬಿಡತಕ್ಕಂಥ ವ್ಯವಸ್ಥೆ ಇದೆಯೇ? ಅದನ್ನು ಹೇಳಿ. ಏಕೆಂದರೆ ಹಿಂದೆ ಬಂದಂತಹ ಮಂತ್ರಿಮಂಡಲಗಳೆಲ್ಲವೂ ಕೂಡ ವೀರಪ್ಪನ್‌ನನ್ನು ಇನ್ನು 3 ತಿಂಗಳನಲ್ಲಿ, ಇನ್ನು 2 ತಿಂಗಳಿನಲ್ಲಿ, ಇನ್ನು 15 ದಿವಸದಲ್ಲಿ ಹಿಡಿಯುತ್ತೇವೆ ಎಂದು ಹೇಳಿಕೊಂಡು ಬರುತ್ತಿದ್ದಾರೆ.

ಉಪಾಧ್ಯಕ್ಷರು:- ತಾವು ನನಗೆ ಹೇಳಿದ್ದುದು ಬಾಂಬ್ ಬಗ್ಗೆ ಮಾತನಾಡುತ್ತೇನೆ ಎಂದು. ಆದರೆ ಈಗಾಗಲೇ ತಾವು ವೀರಪ್ಪನ್ ಬಗ್ಗೆ ಹಿಡಿದುಕೊಂಡು ಹೋಗಿದ್ದೀರಿ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಉಪಾಧ್ಯಕ್ಷರೇ, ಅದಕ್ಕೂ ಇದಕ್ಕೂ ಸಂಬಂಧ ಇದೆ. ಈಗ ಅಕಸ್ಮಾತ್ ಬಾಂಬ್ ಹಾಕುವುದಕ್ಕೆ ಮೈಸೂರಿಗೆ ವೀರಪ್ಪನ್ ಬಂದಿರಬಹುದು. ನೀವು ಆಗ ಏನು ಮಾಡುತ್ತೀರಿ.

ಶ್ರೀ ಕಾಗೋಡು ತಿಮ್ಮಪ್ಪ:- ವಾಟಾಳ್ ನಾಗರಾಜ್‌ರವರನ್ನೇ ಕೊಡಿ, ಅಲ್ಲಿ ವೀರಪ್ಪನ್ ಹಿಡಿಯುವುದಕ್ಕೆ.

ಶ್ರೀ ವಾಟಾಳ್ ನಾಗರಾಜ್:- ಆಗಬಹುದು, ನಾನು ಕೇಳಿದಂತಹ ಎಲ್ಲಾ ಸವಲತ್ತುಗಳನ್ನು ಕೊಟ್ಟು ನೀವು ಹಾಕುವುದಾದರೆ ನಾನು ಒಪ್ಪುತ್ತೇನೆ. ಎಲ್ಲಾ ಕೊಟ್ಟರೆ ನಾನು ಹೋಗುವುದಕ್ಕೆ ರೆಡಿ ಇದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ:- ಕಂ ಆನ್ ಚಾಲೆಂಜ್.

ಶ್ರೀ ವಾಟಾಳ್ ನಾಗರಾಜ್:- ತಾವು ಏಕೆ ಹಾಗೆ ಕೂಗಿಕೊಳ್ಳುತ್ತೀರಿ, ಸ್ವಲ್ಪ ನಿಧಾನವಾಗಿ ಹೇಳಿ.

ತಿಮ್ಮಪ್ಪನವರು ಏತಕ್ಕೆ ಈ ರೀತಿ ಕೂಗಿಕೊಳ್ಳುತ್ತಾರೊ ಗೊತ್ತಿಲ್ಲ. ಏತಕ್ಕೆ ಕೂಗಿಕೊಳ್ಳಬೇಕು? ತಾವು ಹೇಳಿರುವ ಬಗ್ಗೆ ನಾನು ಸ್ವಾಗತ ಮಾಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ಬಹಳ ಸಿಟ್ಟು ಬರುತ್ತಿದೆ.

ಶ್ರೀ ವಾಟಾಳ್‌ನಾಗರಾಜ್:- ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದ್ದನ್ನು ನಾನು ಸ್ವಾಗತ ಮಾಡುತ್ತೇನೆ. ನಾನೇನು ಕೇಳುತ್ತೇನೆ, ಎಲ್ಲಾ ವ್ಯವಸ್ಥೆಮಾಡಿಕೊಡಲಿ. ಅದನ್ನು ನಾನು ಮಾಡುತ್ತೇನೆ. ನಾನು ಆ ರೀತಿ ಹಿಂದಕ್ಕೆ ಹೋಗುವುದಕ್ಕೆ ನಾನು ತಯಾರಾಗಿಲ್ಲ. ಈ ರಾಜ್ಯದ ಹಿತದೃಷ್ಟಿಯಿಂದ, ದೇಶದ ಹಿತದೃಷ್ಟಿಯಿಂದ ನಾನು ಎಂಥ ಕೆಲಸ ಮಾಡುವುದಕ್ಕೆ ಸಿದ್ಧ ಎನ್ನತಕ್ಕಂಥದ್ದನ್ನು ತಿಮ್ಮಪ್ಪನವರಿಗೆ ಹೇಳುತ್ತಿದ್ದೇನೆ.

(2)ಚಿತ್ರದುರ್ಗ ಜಿಲ್ಲೆಯಲ್ಲಿ ಕಾಲರ.

ಶ್ರೀ ಹೆಚ್.ಏಕಾಂತಯ್ಯ:- ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಇವತ್ತು ಪುನಃ ಚಿತ್ರದುರ್ಗದಲ್ಲಿ ಇವತ್ತು ಬೆಳಿಗ್ಗೆ ಇಬ್ಬರು ಸತ್ತಿದ್ದಾರೆ. ಎಷ್ಟು ಗಂಭೀರವಾಗಿದೆ ಎಂದು ಹೇಳಿದರೆ 2660 ಜನರಿಗೆ ಕಾಲರಾ ತಗುಲಿದ್ದು ನಾಲ್ಕುನೂರು ಇಪ್ಪತ್ತೆರಡು (422) ಹಳ್ಳಿಗಳಲ್ಲಿ ಈ ಕಾಲರಾ ತಗುಲಿದೆ ಎಂದು